ಏನಾದರೂ ಸಹಾಯ ಮಾಡಲು ನಾನು ಹಿಂಜರಿಯುವುದಿಲ್ಲ.'

'ಮಿ. ಗುಪ್ತಾ ನಾನು ಈಗ ಮಾಡುತ್ತಿರುವ ವಿನಂತಿಯನ್ನು ನೀವು ಏನೆಂದು ತಿಳಿಯುತ್ತೀರೋ ಗೊತ್ತಿಲ್ಲ. ಅದು ಸರಿಯೆನಿಸದಿದ್ದರೆ ದಯವಿಟ್ಟು ಕ್ಷಮಿಸಿ' ಎಂದು ಹುಡುಗಿ ಹೇಳಿದಳು.

'ಏನದು ನೀನು ಕೇಳಬೇಕೆಂದುಕೊಂಡಿದ್ದು?'

'ನಿನ್ನೆ ತಾಯಿ ಹೇಳುತ್ತಿದ್ದಳು, ಮಿ. ಗುಪ್ತಾ ಬಂದು ಹರಳನ್ನು ನೋಡಿದರೆ ಫ್ರಾಂಕ್ ಬಗ್ಗೆ ಏನಾದರೂ ಸ್ವಲ್ಪ ತಿಳಿಯಬಹುದೆಂದು. ಮಿ. ಗುಪ್ತಾ ಭಾರತೀಯರು. ಅವರು ಬಂದರೆ ಒಳ್ಳೆಯದೆಂದು ಅವರು ಹೇಳಿದ್ದಕ್ಕೆ ನಾನು ನಿಮಗೆ ಪತ್ರ ಬರೆದೆ. ನೀವು ಇನ್ನೊಂದು ಬಾರಿ ಪ್ರಯತ್ನಿಸುತ್ತೀರಾ' ಎಂದು ಕೇಳಿದಳು.

'ಹೋಗಿ ಉಂಗುರ ತೆಗೆದುಕೊಂಡು ಬಾ ಮ್ಯಾಗಿ, ನನ್ನ ಅಭ್ಯಂತರವಿಲ್ಲ.'

'ಆದರೆ, ಈ ಬಾರಿಯೂ ನೀವು ಏನನ್ನು ನೋಡದಿದ್ದರೆ?' ಮ್ಯಾಗಿ ಹೇಳಿದ್ದು ನನಗೆ ಅರ್ಥವಾಯಿತು. ನಾನು ಸುಮ್ಮನಾದೆ.

'ಮಿ. ಗುಪ್ತಾ, ಭಾರತೀಯರು ಅತೀತವನ್ನು ನಂಬುತ್ತಾರೆ ಎಂದು ನಾನು ಪುಸ್ತಕಗಳಿಂದ ಓದಿ ತಿಳಿದುಕೊಂಡಿದ್ದೇನೆ. ನೀವು ಹರಳನ್ನು ನೋಡಿದ ಮೇಲೆ ನನ್ನ ತಾಯಿಗೆ ಒಂದೇ ಒಂದು ಸಾರಿ ಫ್ರಾಂಕ್ ಬದುಕಿದ್ದಾನೆ ಎಂದು ಹೇಳಿದರೆ ಅದು ಸುಳ್ಳಾಗುತ್ತದೆಯೇ? ಅದು ತುಂಬಾ ತುಂಬಾ ತಪ್ಪಾಗುತ್ತದೆಯೇ?' ಅವಳು ಹೀಗೆ ಹೇಳುತ್ತಿದ್ದಂತೆಯೇ ಅವಳ ಕಣ್ಣೀರು ಧಾರೆಯಾಯಿತು.

ನಾನು ಯೋಚನೆ ಮಾಡಿದೆ. ನಾನೇನೂ ತುಂಬಾ ಸದ್ಗುಣವಂತನಲ್ಲ. ನಾನು ಅನೇಕ ಹಿಡಿಸಲಾರದ ಕೆಲಸ ಮಾಡಿದ್ದೇನೆ. ಆದ್ದರಿಂದ ನಾನು ಒಂದು ನಿರ್ಧಾರಕ್ಕೆ ಬಂದೆ. ನನ್ನ ಅಪರಾಧಗಳಲ್ಲಿ ಇದು ಸಣ್ಣದು. 'ಮ್ಯಾಗಿ ಅಳಬೇಡ. ಉಂಗುರ ಎಲ್ಲಿದೆ. ಈ ಸಾರಿ ಸರಿಯಾಗಿ ನೋಡುತ್ತೇನೆ. ನಾನು ಏನೂ ಕಾಣದಿದ್ದರೂ, ನೀನು ಅಂದಂತೆ ಮಾಡುವೆ. ತಪ್ಪಾಗಿದ್ದರೆ ದೇವರು ಕ್ಷಮಿಸುತ್ತಾನೆ' ಎಂದೆ.

ಮ್ಯಾಗಿ ಉಂಗುರ ತಂದಿತ್ತಳು. ನಾನು ಅದನ್ನು ತೆಗೆದುಕೊಂಡು, 'ನೋಡು ನಿನ್ನ ತಾಯಿ ಎಚ್ಚರದಿಂದ ಇದ್ದಾರೆಯೇ?' ಎಂದು ಕೇಳಿದೆ.

ಹದಿನೈದು ನಿಮಿಷಗಳ ತರುವಾಯ ಮ್ಯಾಗಿ ವಾಪಸ್ಸು ಬಂದು, 'ಅಮ್ಮ ಎಚ್ಚರದಿಂದಿದ್ದಾಳೆ. ನೀವು ಇಲ್ಲಿರುವ ಬಗ್ಗೆ ಹೇಳಿದೆ' ಎಂದಳು.

'ನಾನು ಅವರನ್ನು ನೋಡಬಹುದೇ?'

'ದಯವಿಟ್ಟು ಬನ್ನಿ.'

ನಾನು ಅವರ ಹತ್ತಿರ ಹೋದೆ. ಉಂಗುರ ನನ್ನ ಕೈಯಲ್ಲೇ ಇತ್ತು. ಅವರಿಗೆ ಶುಭ ಕೋರುತ್ತ, 'ಮಿಸೆಸ್ ಕ್ಲಿಫರ್ಡ್ ನಿಮ್ಮ ಮಗ ಬದುಕಿದ್ದಾನೆ ಮತ್ತು ಆರೋಗ್ಯವಾಗಿದ್ದಾನೆ' ಎಂದೆ.

ಆ ವಯಸ್ಸಾದ ಹೆಣ್ಣುಮಗಳು ದಿಂಬಿನಿಂದ ತನ್ನ ತಲೆಯನ್ನು ಸ್ವಲ್ಪ ಎತ್ತಿ, 'ನೀವು ಆ ಹರಳಿನಿಂದ ನೋಡಿದಿರಾ' ಎಂದು ಕೇಳಿದರು.

'ಹೌದು ಮಿಸೆಸ್ ಕ್ಲಿಫರ್ಡ್ ನಾನು ನೋಡಿದ್ದೇನೆ' ಎಂದು ಯಾವ ಸಂಕೋಚವೂ ಇಲ್ಲದೇ ಹೇಳಿದೆ.

ಅವರು ಹಾಗೆಯೇ ಒರಗಿದರು. ಅವರ ಕಣ್ಣುಗಳಿಂದ ಆನಂದ ಬಾಷ್ಪಗಳು ಹರಿದವು. 'ದೇವರು ನಿಮಗೆ ಒಳ್ಳೆಯದು ಮಾಡಲಿ' ಎಂದು ಪಿಸು ನುಡಿದರು.

ಮಿಸೆಸ್ ಕ್ಲಿಫರ್ಡ್ ಗುಣಮುಖರಾದರು.